# ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಧರ್ಮ ಮತ್ತು ಶಿಕ್ಷಣ

**ಸ್ವಾಮಿ ಹೃದಾನಂದ**

ಧರ್ಮವೆಂಬುದು ಈ ಪ್ರಪಂಚದಲ್ಲಿ ಪ್ರಾಚೀನ ಕಾಲದಿಂದಲೂ ಇರುವಂತಹ ಒಂದು ಮಹಾಶಕ್ತಿ. ಈ ಅದ್ಭುತ ಪ್ರೇರಣಾಶಕ್ತಿಯು ಕಾಲಪ್ರವಾಹದಲ್ಲಿ ಅನೇಕ ತಿರುವು ಮುರುವುಗಳನ್ನು, ಏರುಪೇರುಗಳನ್ನು ಕಂಡು ನಾನಾ ಅರ್ಥಗಳನ್ನು ಪಡೆದುಕೊಂಡಿದೆ. ಭಾರತದ ಇತಿಹಾಸದಲ್ಲಿ ಪ್ರಚಂಡ ಅಧ್ಯಾತ್ಮ ಶಕ್ತಿಯ ಮಹಾಪುರುಷರು ಉದ್ಭವಿಸಿ ಧರ್ಮದ ಅವನತಿಯನ್ನು ತಡೆದು ಅದರ ಉನ್ನತಿಯನ್ನು ಸಾಧಿಸಲು ಪ್ರಯತ್ನಿಸಿದ್ದಾರೆ. ಇವರುಗಳ ಸಾಲಿನಲ್ಲಿಯೇ ಅವತರಿಸಿದ ಸ್ವಾಮಿ ವಿವೇಕಾನಂದರು ಕೂಡ ಧರ್ಮದ ಅನಾವಶ್ಯಕವಾದ ಭಾಗವನ್ನು ಬಿಟ್ಟು, ಅದರ ತಿರುಳನ್ನು ಸುಲಲಿತವಾಗಿ ಅರ್ಥವಾಗುವಂತೆ ಮಾನವ ಜನಾಂಗದ ಮುಂದೆ ಇಟ್ಟಿದ್ದಾರೆ. ಗುರುದೇವ ಶ್ರೀರಾಮಕೃಷ್ಣರಿಂದ ಪಡೆದ ಶಿಕ್ಷಣ, ಅವರ ಕೃಪೆಯಿಂದ ದೊರೆತ ಅತೀಂದ್ರೀಯಾನುಭವಗಳು, ಹಿಂದೂಶಾಸ್ತ್ರಗಳ ಮತ್ತು ಪಾಶ್ಚಾತ್ಯ ವಿಚಾರಧಾರೆಯ ಆಳವಾದ ಅಧ್ಯಯನ –ಇವುಗಳೆಲ್ಲದರ ಆಧಾರದ ಮೇಲೆ ಸ್ವಾಮೀಜಿ ಧರ್ಮದ ಬಗ್ಗೆ ಸ್ಪಷ್ಟ ಪರಿಕಲ್ಪನೆಯನ್ನು ನಮ್ಮ ಮುಂದಿಡುತ್ತಾರೆ.

## ಧರ್ಮ ಎಂದರೇನು?

ಮನುಷ್ಯ ಮತ್ತು ದೇವರ ಸಂಬಂಧವೇ ಧರ್ಮ. ಇದೊಂದು ಪ್ರಚಂಡ ಪ್ರೇರಣಾಶಕ್ತಿ. ಪಿತೃಪೂಜೆಯೇ ಧಾರ್ಮಿಕ ಭಾವನೆಗಳಿಗೆ ಮೂಲ ಎಂದು ಕೆಲವರು ಹೇಳಿದರೆ, ಮತ್ತೆ ಕೆಲವರು ಪ್ರಕೃತಿಯ ಶಕ್ತಿಗಳಿಗೆ ವ್ಯಕ್ತಿತ್ವವನ್ನು(ಅಗ್ನಿ, ವರುಣ....) ಕೊಡುವ ಪ್ರಯತ್ನವೇ ಅದರ ಮೂಲವೆಂದು ಹೇಳುತ್ತಾರೆ. ಮಾನವನು ತನ್ನ ಇಂದ್ರಿಯಗಳ ಮಿತಿಯನ್ನು ಅರಿತು, ಅವುಗಳನ್ನು ಮೀರಿ ಹೋಗುವ ಪ್ರಯತ್ನವೇ ಧರ್ಮವೆಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಇಹಜೀವನದ ಎಲ್ಲೆಗಳ ಆಚೆ ಹೋಗುವುದೇ ಧ್ಯೇಯವಾಗುಳ್ಳ, ಮನುಷ್ಯನ ಮತ್ತು ಭಗವಂತನ ನಡುವೆ ಇರುವ ಸಂಬಂಧದ ನಿರ್ಣಯವೇ ಧರ್ಮ. ಅಂತರ್ನಿಹಿತ ಆತ್ಮಚೈತನ್ಯದ ಸಾಕ್ಷಾತ್ಕಾರಕ್ಕೆ ಅನುಸರಿಸಬೇಕಾದ ವಿಧಿ, ವಿಧಾನ, ಸಾಧನೆ, ಯಂತ್ರ, ತಂತ್ರ, ಮಂತ್ರ ಮುಂತಾದವುಗಳು ಆಚಾರವಿಚಾರಗಳಾಗಿ ರೂಪುಗೊಂಡ ಸಮಷ್ಟಿ ವಿಜ್ಞಾನವೇ 'ಧರ್ಮ.'

## ಸಾಕ್ಷಾತ್ಕಾರವೇ ಧರ್ಮದ ಆಧಾರ

ಮಾನವನ ಮನಸ್ಸಿಗೆ ಇಂದ್ರಿಯಗಳ ಮೇರೆಯನ್ನು ಮತ್ತು ಯುಕ್ತಿಯನ್ನು ಮೀರಿ ಹೋಗುವ ಶಕ್ತಿ ಇದೆ. ಈ ಶಕ್ತಿಯು ಅತೀಂದ್ರಿಯ ಅನುಭವದ ಸ್ಥಿತಿಯಲ್ಲಿ ವ್ಯಕ್ತವಾಗುತ್ತದೆ. ಆ ಅನುಭವದಲ್ಲಿ ಅಸಾಧಾರಣ ಸತ್ಯಗಳನ್ನು ಸಾಕ್ಷಾತ್ಕರಿಸಿಕೊಳ್ಳ



ಬಹುದು. "ಎಲ್ಲ ಧರ್ಮಗಳಲ್ಲಿಯೂ ಏಕ ಅಮೂರ್ತ ಭಾವನೆಯ ಆದರ್ಶ ಮುಖ್ಯವಾಗಿ ನಿಲ್ಲುವುದು. ಅದನ್ನು ನಮ್ಮ ಸಾಕಾರದಂತೆಯೊ, ನಿರಾಕಾರದಂತೆಯೊ, ಒಂದು ನಿಯಮದಂತೆಯೊ, ಒಂದು ಅಸ್ತಿತ್ವದಂತೆಯೊ, ಎಲ್ಲಾ ವಸ್ತುಗಳ ಸಾರದಂತೆಯೊ ಇಟ್ಟಿದ್ದಾರೆ. ಆ ಆದರ್ಶದ ಮಟ್ಟಕ್ಕೆ ಏರಲು ನಾವು ಯಾವಾಗಲೂ ಹೋರಾಡುತ್ತಿರುವೆವು. ಮಾನವನು ಯಾರಾದರಾಗಲಿ ಎಲ್ಲಿಯಾದರೂ ಇರಲಿ ಅವನ ಮುಂದೆ ಅನಂತ ಶಕ್ತಿಯ ಆದರ್ಶವಿದೆ, ಅನಂತ ಆನಂದದ ಆದರ್ಶವಿದೆ." [1]

ತೋರಿಕೆಯ ಈ ದೇಹ ಮತ್ತು ಮನಸ್ಸುಗಳ ಹಿಂದೆ ನಿತ್ಯ, ಶುದ್ಧ, ಬುದ್ಧ, ಅವಿನಾಶಿ, ಅವಿಕಾರಿ, ಅನಂತ, ಆನಂದ ಸ್ವರೂಪದ ಚೈತನ್ಯವಿದೆ. ಪ್ರತಿಯೊಬ್ಬನಲ್ಲೂ ಇರುವ ಈ ಚೈತನ್ಯವೇ ಇಡೀ ಸೃಷ್ಟಿಯನ್ನು ವ್ಯಾಪಿಸಿದೆ. ಈ ಸತ್ಯವನ್ನು ಅತೀಂದ್ರಿಯ ಅನುಭವದಲ್ಲಿ ಸಾಕ್ಷಾತ್ಕರಿಸಿಕೊಳ್ಳಬಹುದು. ಇಂತಹ ಸಾಕ್ಷಾತ್ಕಾರ ಪಡೆದುಕೊಂಡ ಮನುಷ್ಯ ಎಲ್ಲ ರೀತಿಯ ಬಂಧನಗಳಿಂದ ಬಿಡುಗಡೆ ಹೊಂದಿ ನಿತ್ಯ ಅನಂತ ಆನಂದದಲ್ಲಿ ಪರಿಪೂರ್ಣನಾಗುತ್ತಾನೆ. ಈ ಸಾಕ್ಷಾತ್ಕಾರವೇ ಧರ್ಮದ ತಳಹದಿ. ಇದು ಸಾಧ್ಯವೆಂದು ಹಲವು ಮಹಾತ್ಮರ ಮೂಲಕ ತಿಳಿದು ಸಂಸಾರಜಾಲದಲ್ಲಿ ನರಳುತ್ತಿರುವ ಮಾನವರು ಅದಕ್ಕಾಗಿ ಪ್ರಯತ್ನಿಸುತ್ತಿರುವರು. ಈ ಪ್ರಯತ್ನವು ಸಫಲವಾಗಬೇಕಾದರೆ ಜೀವನವನ್ನು ನೀತಿನಿಯಮಗಳ ಆಧಾರದ ಮೇಲೆ ರೂಪಿಸಿಕೊಳ್ಳಬೇಕು. ಒಬ್ಬ ವ್ಯಕ್ತಿ ಜಾತಿ ಮತ್ತು ಹುಟ್ಟುಗಳ ಅನುಗುಣವಾಗಿ ಒಂದೊಂದು ಸ್ಥಾನದಲ್ಲಿರುತ್ತಾನೆ. ಆಯಾ ಸ್ಥಾನಕ್ಕೆ ತಕ್ಕಂತೆ ಪ್ರತ್ಯೇಕವಾಗಿ ನೀತಿನಿಯಮಗಳಿರುತ್ತವೆ. ಅವುಗಳನ್ನು ಪಿಂಡಧರ್ಮಗಳೆಂದು ಕರೆಯುತ್ತಾರೆ. ಉದಾ: ಗೃಹಸ್ಥಧರ್ಮ,

ಸಂನ್ಯಾಸಧರ್ಮ ಇತ್ಯಾದಿ. ಸತ್ಯಪಾಲನೆ, ಕರುಣೆ ಮುಂತಾದವು ಸಾಧಾರಣ ಧರ್ಮಗಳು. ಇವುಗಳನ್ನು ಎಲ್ಲಾ ಕಾಲದಲ್ಲಿಯೂ ಪಾಲಿಸಬೇಕು ಅವುಗಳ ಜೊತೆಗೆ ಮೇಲೆ ಹೇಳಿದ ಖಂಡಧರ್ಮಗಳನ್ನೂ ಅನುಸರಿಸಬೇಕು. ಆಗ ಮಾತ್ರ ಆತ್ಮಸಾಕ್ಷಾತ್ಕಾರ ಸಾಧ್ಯ.

### ಸಾಕ್ಷಾತ್ಕಾರದ ಪಥಗಳು

ಆಂತರಿಕ ಮತ್ತು ಬಾಹ್ಯ ಪ್ರಕೃತಿಯನ್ನು ಗೆಲ್ಲಲು ಅನೇಕ ಮಾರ್ಗಗಳಿವೆ. ಒಬ್ಬ ವ್ಯಕ್ತಿ ತನ್ನ ಸ್ವಭಾವಕ್ಕನುಗುಣವಾಗಿ ಯಾವುದಾದರೂ ಮಾರ್ಗವನ್ನು ಅನುಸರಿಸಬಹುದು. ಎಲ್ಲಾ ನದಿಗಳು ನೇರವಾಗಿ ಅಥವಾ ಬಳಸಿಕೊಂಡು ಹರಿದು ಹೇಗೆ ಸಮುದ್ರವನ್ನು ಸೇರುವವೋ ಅದೇ ರೀತಿ ವಿವಿಧ ಮಾರ್ಗಗಳಲ್ಲಿ ಹೋಗುತ್ತಿರುವ ಸಾಧಕರು ಒಂದೇ ಭಗವಂತನನ್ನೇ ಸೇರುವರು. ಒಬ್ಬೊಬ್ಬರದು ಒಂದೊಂದು ರೀತಿಯ ಸ್ವಭಾವ. ಒಂದೊಂದು ಸ್ವಭಾವಕ್ಕೆ ಒಂದೊಂದು ಪಥ. ಮನುಷ್ಯರ ಸ್ವಭಾವಗಳನ್ನು ಪ್ರಧಾನತಃ ನಾಲ್ಕು ಭಾಗಗಳಾಗಿ ವಿಂಗಡಿಸಿ ಅವಕ್ಕೆ ತಕ್ಕಂತೆ ನಾಲ್ಕು ಸಾಧನೆಯ ಪಥಗಳನ್ನು ನಮ್ಮೆದುರಿಗೆ ಆಧ್ಯಾತ್ಮಿಕ ದಿಗ್ಗಜರು ಇಟ್ಟಿದ್ದಾರೆ. ಅವು ಯಾವುವೆಂದರೆ ಭಕ್ತಿಯೋಗ, ಜ್ಞಾನಯೋಗ, ಕರ್ಮಯೋಗ ಮತ್ತು ರಾಜಯೋಗ. ಇವು ಕ್ರಮಶಃ ಮನುಷ್ಯನ ಪ್ರೀತಿಸುವ, ವಿಚಾರ ಮಾಡುವ, ಕ್ರಿಯಾಶೀಲ ಮತ್ತು ಅಂತರ್ಮುಖಿ ಸ್ವಭಾವದ ಆಧಾರದ ಮೇಲೆ ರೂಪಿಸಲ್ಪಟ್ಟಿವೆ.

### ಅನುಷ್ಠಾನ ವೇದಾಂತ

ವೇದಾಂತದಲ್ಲಿರುವ ಸಂಜೀವಿನಿ ತತ್ತ್ವಗಳನ್ನು ದೈನಂದಿನ ಜೀವನದಲ್ಲಿ ಕಾರ್ಯರೂಪಕ್ಕೆ ತರದೇ ಇದ್ದುದರಿಂದಲೇ ಭಾರತದಲ್ಲಿ ಜಾತಿಭೇದ, ದರಿದ್ರರ ಶೋಷಣೆ ಮುಂತಾದುವು ಆರಂಭಗೊಂಡು, ದೇಶವು ಗುಲಾಮಗಿರಿಗೆ ಒಳಗಾಯಿತು. ವೇದಾಂತವು ಪ್ರತಿಯೊಬ್ಬನಲ್ಲೂ ಇರುವ ದಿವ್ಯತೆಯನ್ನು ಸಾರುವುದು. ಈ ತತ್ತ್ವವನ್ನು ರಹಸ್ಯವಾಗಿ ಕಾಡುಗಳಲ್ಲಿ, ಗಿರಿಗುಹೆಗಳಲ್ಲಿ ಮಾತ್ರ ಚರ್ಚಿಸಲಾಗುತ್ತಿತ್ತು. ಈ ಚೇತೋಹಾರಿ ಭಾವನೆಗಳನ್ನು ಜನಸಾಮಾನ್ಯರಿಗೆ ತಲುಪಿಸುವುದೇ ಸ್ವಾಮಿ ವಿವೇಕಾನಂದರ ಜೀವನಧ್ಯೇಯವಾಗಿತ್ತು. "ನನ್ನ ಆದರ್ಶವನ್ನು ಕೆಲವೇ ಮಾತುಗಳಲ್ಲಿ ಹೇಳಬಹುದು, ಅದೇನೆಂದರೆ ಮಾನವ ಕುಲಕ್ಕೆ ಅದರ ದಿವ್ಯತೆಯನ್ನು ಬೋಧಿಸುವುದು ಮತ್ತು ಅದನ್ನು ಯಾವ ರೀತಿ ದೈನಂದಿನ ಜೀವನದಲ್ಲಿ ವ್ಯಕ್ತಪಡಿಸಬೇಕು ಎಂದು ತಿಳಿಸುವುದು"[2] ಎನ್ನುತ್ತಾರೆ ಸ್ವಾಮೀಜಿ. ಆತ್ಮವು ಅಪಾರ ಶಕ್ತಿಯ ಗಣಿಯಾಗಿದೆ. ಒಬ್ಬ ಚಮ್ಮಾರನಿಗೆ ಆತ್ಮತತ್ತ್ವವನ್ನು ಬೋಧಿಸಿದರೆ ಅವನು ತನ್ನಲ್ಲಿರುವ ಅಪಾರ ಶಕ್ತಿಯ ಮೇಲೆ ವಿಶ್ವಾಸವಿಟ್ಟು, ಒಳ್ಳೆಯ ಚಮ್ಮಾರನಾಗುವನು. ಈ ರೀತಿ ಸಮಾಜದ ಪ್ರತಿಯೊಬ್ಬನಲ್ಲಿಯೂ ಆತ್ಮವಿಶ್ವಾಸ ಮೂಡಿದರೆ ಇಡೀ ಸಮಾಜವೇ ಉನ್ನತಿ ಸಾಧಿಸುತ್ತದೆ. ಈ ಆತ್ಮನೇ ಪ್ರಪಂಚದಲ್ಲಿ ದರಿದ್ರನಂತೆ, ರೋಗಿಯಂತೆ, ಪೀಡಿತನಂತೆ ಬೇರೆ ಬೇರೆ ರೂಪಗಳಲ್ಲಿ ಕಂಡುಬರುತ್ತಾನೆ. ಎಲ್ಲರಲ್ಲೂ ಆತ್ಮನನ್ನು ಕಾಣುತ್ತಾ ಆಯಾ ರೂಪಕ್ಕೆ ತಕ್ಕಂತೆ ಮಾನವ ಸೇವೆಯನ್ನು ಮಾಡುವುದೇ ಅನುಷ್ಠಾನ ವೇದಾಂತ. ಉದಾಹರಣೆಗೆ ರೋಗಿಯ ರೂಪದಲ್ಲಿರುವ ಆತ್ಮವನ್ನು ಔಷಧೋಪಚಾರಗಳಿಂದ ಸೇವೆ ಮಾಡಬಹುದು. ಇನ್ನೊಂದು ಅಂಶವಿದೆ. ಅದೇನೆಂದರೆ ಪ್ರತಿಯೊಬ್ಬರಲ್ಲಿಯೂ ಸುಪ್ತವಾಗಿರುವ ಆತ್ಮವು ಭಗವದ್ರೂಪವೇ ಆಗಿದೆ ಎನ್ನುವುದು. ಶ್ರೀರಾಮಕೃಷ್ಣರು ಅದಕ್ಕೆಂದೇ, ಶಿವನೆಂದು ಭಾವಿಸಿ ಮಾನವಸೇವೆ ಮಾಡುವುದು ಅತ್ಯಂತ ಶ್ರೇಷ್ಠ ಧರ್ಮಸಾಧನೆ ಎನ್ನುತ್ತಾರೆ. ಇದರಿಂದ ಅತಿ ಶೀಘ್ರವಾಗಿ ಚಿತ್ತಶುದ್ಧಿ ಉಂಟಾಗುವುದು. ಶುದ್ಧಚಿತ್ತದಲ್ಲಿ ಪರಮಾತ್ಮನು ತನಗೆ ತಾನೇ ಅಭಿವ್ಯಕ್ತವಾಗುವನು. ಇದೇ ಸ್ವಾಮಿ ವಿವೇಕಾನಂದರ ನವವೇದಾಂತ ತತ್ತ್ವ. ರಾಮಕೃಷ್ಣ ಮಹಾಸಂಘದ ಎಲ್ಲ ಚಟುವಟಿಕೆಗಳ ಹಿಂದಿನ ಆಧಾರತತ್ತ್ವವೂ ಇದೇ ಆಗಿದೆ.

> "...ವೇದಾಂತವು ಹಿಂದಿನ ದೇವರ ಭಾವನೆಯನ್ನು ಬೋಧಿಸುವುದಿಲ್ಲ. ಎಲ್ಲೋ ಮೋಡಗಳಾಚೆ ಕುಳಿತು ನಮ್ಮ ಇಚ್ಛೆಯನ್ನು ಕೇಳದೆ ಪ್ರಪಂಚವನ್ನು ನಡೆಸುತ್ತಿರುವ, ಅವನ ಇಚ್ಛೆಯಾಯಿತೆಂದು ನಮ್ಮನ್ನೆಲ್ಲ ಶೂನ್ಯದಿಂದ ಸೃಷ್ಟಿಸಿ ಈ ದುಃಖದ ಅನುಭವದ ಮೂಲಕ ಸಾಗಿಹೋಗುವಂತೆ ಮಾಡುವ ದೇವರನ್ನು ವೇದಾಂತ ಬೋಧಿಸದೆ, ಪ್ರತಿಯೊಬ್ಬರಲ್ಲೂ ಇರುವ, ಪ್ರತಿಯೊಂದು ವಸ್ತುವೂ, ಪ್ರತಿಯೊಂದು ವ್ಯಕ್ತಿಯೂ ಆಗಿರುವ ದೇವರನ್ನು ವೇದಾಂತ ಬೋಧಿಸುವುದು. ಚಕ್ರವರ್ತಿ ದೇಶದಿಂದ ನಿರ್ಗಮಿಸಿದ. ಹಾಗೆಯೇ ವೇದಾಂತದಲ್ಲಿ ಸ್ವರ್ಗದ ರಾಜ (ದೇವರು) ನೂರಾರು ವರ್ಷಗಳ ಹಿಂದೆಯೇ ಮಾಯವಾದ." –ಸ್ವಾಮಿ ವಿವೇಕಾನಂದ

### ವಿಶ್ವ ಧರ್ಮದ ಆದರ್ಶ

ಈ ವಿಶ್ವದಲ್ಲಿ ನಾನಾ ಧರ್ಮಪಂಥಗಳಿವೆ. ಪಂಥಗಳು ಹೆಚ್ಚಿದಂತೆ ಜನರಿಗೆ ಧರ್ಮ ಸಿಕ್ಕುವ ಸೌಲಭ್ಯ ಹೆಚ್ಚುವುದು. ಹಲವು ಬಗೆಯ ಪದಾರ್ಥಗಳಿರುವ ಹೋಟಲಿನಲ್ಲಿ ಎಲ್ಲರ ಆಸೆಯೂ ತೃಪ್ತಿಯಾಗುವ ಸಂಭವವಿದೆ. ಪಂಥಗಳು ಹೆಚ್ಚಿದರೆ ಹೆಚ್ಚು ಹೆಚ್ಚು ಜನರು ಧಾರ್ಮಿಕರಾಗಲು ಅವಕಾಶವಾಗುವುದು. ಆದರೆ ಆ ಎಲ್ಲ ಧರ್ಮಗಳ ಸಮಾನವೇದಿಕೆಯಾಗಿ ವಿಶ್ವಧರ್ಮದ ಆದರ್ಶವೊಂದಿರಬೇಕು. ಆ ಆದರ್ಶ ಧರ್ಮದ ಬಗ್ಗೆ ಉಲ್ಲೇಖಿಸುವ ಸ್ವಾಮೀಜಿಯವರ ಚಿಂತನೆ ಹೀಗಿದೆ: ಆ ವಿಶ್ವಧರ್ಮವು ವಿಭಿನ್ನ ಭಾವದವರನ್ನೆಲ್ಲಾ ಪೋಷಿಸುವಷ್ಟು ವಿಶಾಲವಾಗಿರಬೇಕು, ಉದಾರವಾಗಿರಬೇಕು. ತಾತ್ತ್ವಿಕನಿಗೆ ಭಕ್ತನಿಗೆ, ಅಂತರ್ಮುಖಿಗೆ, ಕರ್ಮಪರನಿಗೆ– ಎಲ್ಲರಿಗೂ ಅದರಲ್ಲಿ ಸ್ಥಾನವಿರಬೇಕು. ಎಲ್ಲಾ ಧರ್ಮಗಳ ಮೂಲತತ್ತ್ವಕ್ಕೆ ಹೋಗಿ ವಿಶ್ವಭ್ರಾತೃತ್ವದ ರೀತಿಯಲ್ಲಿ ವಿಶ್ವಧರ್ಮವನ್ನೂ ನಿರ್ಮಿಸಬೇಕು. ಈ ಕಲ್ಪನೆ ಅನುಷ್ಠಾನ ಸಾಧ್ಯವೇ? ಸ್ವಾಮೀಜಿ ಅದರ

**ಧರ್ಮ ಹೇಗಿರಬೇಕು?**

೧. ಧರ್ಮ ವಿಜ್ಞಾನಸಮ್ಮತವಾಗಿರಬೇಕು; ಹಾಗಿಲ್ಲದಿದ್ದರೆ, ಅದು ತನ್ನ ಘನತೆಯನ್ನು ಕಳೆದುಕೊಂಡು, ಕೇವಲ ಅಣಕದ ವಸ್ತುವಾದೀತು, ಅಷ್ಟೇ ಅಲ್ಲ, ಅದು ಬದುಕನ್ನು ನಿಯಂತ್ರಿಸುವ ಮೂಲ ತತ್ತ್ವವಾಗಿಯೂ ತನ್ನ ಸತ್ವವನ್ನು ಕಳೆದುಕೊಳ್ಳುವುದಲ್ಲದೆ, ಕಾಲಕ್ರಮೇಣ ಛಿದ್ರಗೊಂಡು ನಷ್ಟಹೊಂದುತ್ತದೆ. *– ಡಾ. ಬಿ.ಆರ್. ಅಂಬೇಡ್ಕರ್*

೨. ಸರ್ವಗ್ರಾಸಿಯಾದ ಧರ್ಮ ಯಾವುದೆಂದರೆ, ಮನುಷ್ಯನ ಮನಸ್ಸು ಮತ್ತು ಆತ್ಮಗಳ ಪರಿಪೂರ್ಣ ವಿಕಾಸದ ಜೊತೆಗೆ, ವಿಶ್ವಸಾಮಾನ್ಯವಾದ ಕೆಲವು ಗುಣಗಳ ಶಕ್ತಿ–ಸಾಮರ್ಥ್ಯಗಳ ಸಾಮರಸ್ಯವಾಗಿ, ಆ ಮೂಲಕ ಅತ್ಯುತ್ತಮ ಮನುಷ್ಯನನ್ನು ನಿರ್ಮಿಸುವ ಪ್ರೇರಕ ಶಕ್ತಿ.

*– ಮಹರ್ಷಿ ಅರವಿಂದರು*

೩. ವಿಶ್ವದಲ್ಲಿ ತಾನೊಬ್ಬನೇ ಇರುವುದು ಎಂಬ ಹಾಗೆ ಯಾವ ಮಾನವನೂ ಭ್ರಮಿಸಬಾರದು ಎಂಬ ಎಚ್ಚರವನ್ನು ಇಡುವಂಥದು ಧರ್ಮ... ಆದರೆ ಹಾಗೆ ಮಾಡುವಾಗ ನಮ್ಮ ಪ್ರಜ್ಞಾಪರಿಧಿಯೊಳಕ್ಕೆ ಬರುವ ಯಾವ ಸತ್ಯ ಸಂಗತಿಯನ್ನೂ ನಿರಾಕರಿಸಬಾರದು.

*–ಎಂ. ಗೋಪಾಲಕೃಷ್ಣ ಅಡಿಗ*

ಪ್ರಾಯೋಗಿಕ ರೀತಿನೀತಿಯನ್ನು ಹೀಗೆ ಹೇಳುತ್ತಾರೆ. "ನಾನು ಮಹಮದೀಯರ ಮಸೀದಿಗೆ ಹೋಗುತ್ತೇನೆ, ಕ್ರೈಸ್ತರ ಚರ್ಚಿಗೆ ಹೋಗಿ ಶಿಲುಬೆ ಎದುರು ಬಾಗುತ್ತೇನೆ. ಬೌದ್ಧರ ವಿಹಾರಕ್ಕೆ ಹೋಗಿ ಬುದ್ಧನಲ್ಲಿ ಮತ್ತು ಅವನ ಧರ್ಮದಲ್ಲಿ ಶರಣಾಗುತ್ತೇನೆ, ಹಿಂದೂಗಳೊಂದಿಗೆ ಕಾಡಿಗೆ ಹೋಗಿ ಎಲ್ಲರಲ್ಲೂ ಬೆಳಗುತ್ತಿರುವ ಆ ಪರಂಜ್ಯೋತಿಯ ದರ್ಶನಕ್ಕಾಗಿ ಧ್ಯಾನ ಮಾಡುವವರೊಂದಿಗೆ ಕುಳಿತು ನಾನೂ ಧ್ಯಾನ ಮಾಡುತ್ತೇನೆ."[೨] ಇಂತಹ ಉದಾರ ವಿಶ್ವದೃಷ್ಟಿಯಿಂದ ಮಾತ್ರ ಎಲ್ಲ ಮತಾಂಧತೆ ಮತ್ತು ಕೋಮುಭಾವಗಳು ಅವಸಾನವಾಗಿ ರಕ್ತಪಾತ, ಹಿಂಸೆ, ದ್ವೇಷ ಮುಂತಾದುವು ಜಗತ್ತಿನಿಂದ ದೂರವಾಗಲು ಸಾಧ್ಯ. ಆಗ ಮಾತ್ರ ವಿಶ್ವಶಾಂತಿ ಸ್ಥಾಪನೆಯಾಗುವುದು.

**ಶಿಕ್ಷಣ**

ಉಪನಿಷತ್ತುಗಳ ಪ್ರಕಾರ ಅಪರಾವಿದ್ಯೆ ಮತ್ತು ಪರಾವಿದ್ಯೆ ಎಂಬ ಎರಡು ವಿದ್ಯೆಗಳು ಈ ಜಗತ್ತಿನಲ್ಲಿ ಇವೆ. ಯಾವ ಜ್ಞಾನದಿಂದ ಇಂದ್ರಿಯಗಳ ಮೇರೆಯನ್ನು ಮೀರಿ ಆತ್ಮಾನುಭೂತಿಯನ್ನು ಪಡೆಯಬಹುದೋ ಅದು ಪರಾವಿದ್ಯೆ. ಯಾವ ಜ್ಞಾನದಿಂದ ಈ ಜಗತ್ತಿನಲ್ಲಿ ನಾವು ಸುಖವಾಗಿ ಬಾಳಬಹುದೋ ಅದು ಅಪರಾವಿದ್ಯೆ. ಈ ಎರಡೂ ಬಗೆಯ ಜ್ಞಾನವು ಪ್ರತಿಯೊಬ್ಬ ವ್ಯಕ್ತಿಯಲ್ಲೂ ಅಂತರ್ನಿಹಿತವಾಗಿದೆ. ಶಿಕ್ಷಣದ ಬಗ್ಗೆ ಸ್ವಾಮೀಜಿ ಈ ರೀತಿ ಹೇಳುತ್ತಾರೆ, *"ಈಗಾಗಲೇ ಇರುವ ಪರಿಪೂರ್ಣತೆಯನ್ನು ವ್ಯಕ್ತಪಡಿಸುವುದೇ ಶಿಕ್ಷಣ"* ಎಂದು. ಅಂದರೆ ಬೀಜಾಕಾರದಲ್ಲಿ ಇರುವಂತಹ ಜ್ಞಾನವನ್ನು ಬಾಹ್ಯ ಸಹಾಯ ಸಾಧನಗಳಿಂದ, ಬೆಳವಣಿಗೆ ಮತ್ತು ಅಭಿವೃದ್ಧಿಗಳ ಮೂಲಕ ಹೊರತರುವುದೇ ಶಿಕ್ಷಣ. ಒಂದು ಗಿಡದ ಬೆಳವಣಿಗೆಗೆ ನೀರು ಮತ್ತು ಗೊಬ್ಬರ ಸಹಾಯ ಮಾಡುವಂತೆ ಗುರುವು ಶಿಷ್ಯನಿಗೆ ತನ್ನ ಬೋಧನೆ ಮತ್ತು ಆದರ್ಶ ಜೀವನಗಳ ಮೂಲಕ ನೇರವಾಗಿ ಅವನಲ್ಲಿ ಹುದುಗಿರುವ ಜ್ಞಾನ ಪ್ರಕಟವಾಗುವಂತೆ ಮಾಡುವನೇ ಹೊರತು ಮತ್ತೇನಲ್ಲ. ಶಿಕ್ಷಣದಿಂದ ಒಬ್ಬ ಮನುಷ್ಯನನ್ನು ಅಪರಾವಿದ್ಯೆಯಲ್ಲಿ ಪಾರಂಗತನನ್ನಾಗಿ ಮಾಡಿದರೆ ಅವನಲ್ಲಿ ವಿಚಾರಶಕ್ತಿ ಮೂಡುತ್ತದೆ. ಅವನು ಕ್ರಮೇಣ ಪರಾವಿದ್ಯೆಗಾಗಿ ಪ್ರಯತ್ನಿಸುವನು.

**ಏಕಾಗ್ರತೆಯೇ ಶಿಕ್ಷಣದ ಮೂಲ**

"ನನ್ನ ದೃಷ್ಟಿಯಲ್ಲಿ ವಿದ್ಯಾಭ್ಯಾಸದ ಸಾರವೆ ಮನಸ್ಸಿನ ಏಕಾಗ್ರತೆಯಲ್ಲಿರುವುದು; ವಿಷಯಸಂಗ್ರಹದಲ್ಲಿ ಅಲ್ಲ. ನಾನೇನಾದರೂ ಪುನಃ ವಿದ್ಯಾಭ್ಯಾಸವನ್ನು ಮಾಡಬೇಕಾದರೆ, ಅಲ್ಲಿ ನನಗೇನಾದರೂ ಸ್ವಾತಂತ್ರ್ಯವಿದ್ದರೆ, ನಾನು ವಿಷಯಗಳನ್ನು ಕಲಿಯುವುದೇ ಇಲ್ಲ. ಅದಕ್ಕೆ ಬದಲು ಏಕಾಗ್ರತೆ ಮತ್ತು ಅನಾಸಕ್ತಿಯ ಶಕ್ತಿಯನ್ನು ರೂಢಿಸಿಕೊಂಡು, ಅನಂತರ ಬೇಕಾದಾಗ ವಿಷಯಸಂಗ್ರಹ ಮಾಡುವೆನು"[೩]–ಸ್ವಾಮೀಜಿಯವರ ಈ ಮಾತುಗಳ ಪ್ರಕಾರ ಏಕಾಗ್ರತೆ ಸಾಧಿಸಬೇಕಾದರೆ ವಿದ್ಯಾರ್ಥಿಯ ದೈನಂದಿನ ಜೀವನ ನಿಯಮಿತವಾಗಿರಬೇಕು. ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೇಳುವಂತೆ ಯುಕ್ತಾಹಾರ, ವಿಹಾರಗಳಿಂದ ಕೂಡಿದ ವ್ಯಕ್ತಿಯ ಮನಸ್ಸು ಮಾತ್ರ ಏಕಾಗ್ರತೆ ಪಡೆಯಲು ಸಾಧ್ಯ.

**ನೈಜ ವ್ಯಕ್ತಿಗಳನ್ನು ರೂಪಿಸುವುದೇ ಶಿಕ್ಷಣದ ಗುರಿ**

ಶಿಕ್ಷಣವೆಂದರೆ ಶಾಲಾ ಕಾಲೇಜುಗಳಿಗೆ ಹೋಗಿ ವಿಷಯ ಸಂಗ್ರಹಿಸುವುದಲ್ಲ. ಶಿಕ್ಷಣ ಶೀಲವನ್ನು ರೂಪಿಸಬೇಕು. ಸದ್ಗುಣಗಳ ಅಭ್ಯಾಸವೇ ಒಬ್ಬ ವ್ಯಕ್ತಿಯನ್ನು ಶೀಲವಂತನನ್ನಾಗಿಸುವುದು. ಶೀಲವಂತ ವ್ಯಕ್ತಿ ತನ್ನ ಜೀವನದಲ್ಲಿ ಬರುವ ಎಲ್ಲಾ ಬಗೆಯ ಕಷ್ಟಗಳನ್ನು ಸುಲಭವಾಗಿ ಪರಿಹರಿಸಿಕೊಂಡು, ಉನ್ನತಿಯನ್ನು ಸಾಧಿಸಬಲ್ಲ. ಕೇವಲ ವಿಷಯಸಂಗ್ರಹದಿಂದ ಮಾತ್ರವೇ ವಿದ್ಯಾವಂತನೆನಿಸಿಕೊಂಡ ವ್ಯಕ್ತಿ ಅಲ್ಪಸ್ವಲ್ಪ ಕಷ್ಟಗಳಿಗೂ ಕುಸಿದು ಬೀಳುವನು. ಸುಶೀಲನಾದ ವ್ಯಕ್ತಿ ದೈಹಿಕವಾಗಿ ಬಲಶಾಲಿಯಾಗಿ, ಮಾನಸಿಕವಾಗಿ ಸದೃಢನಾಗಿ, ನೈತಿಕವಾಗಿ ಮತ್ತು ಧಾರ್ಮಿಕವಾಗಿ ನಿಷ್ಠಾವಂತನಾಗಿರುತ್ತಾನೆ. ಶಿಕ್ಷಣವು ಇಂತಹ ಸುಶೀಲ ವ್ಯಕ್ತಿಗಳನ್ನು ನಿರ್ಮಾಣ ಮಾಡಿ, ಸಮಾಜಕ್ಕೆ ಮಂಗಳವನ್ನುಂಟುಮಾಡಬೇಕು.

**ಗುರುಗೃಹವಾಸ ಮತ್ತು ಬ್ರಹ್ಮಚರ್ಯ**

ಹಿಂದಿನ ಕಾಲದಲ್ಲಿ ಶಿಷ್ಯರು ಗುರುಗಳೊಂದಿಗೆ ವಾಸ ಮಾಡಿ ಶಿಕ್ಷಣ ಪಡೆಯುತ್ತಿದ್ದರು. ಗುರುವಿನ ನಡತೆಯಲ್ಲಿರುವ ಸದ್ಗುಣಗಳನ್ನು ಗಮನಿಸುತ್ತ, ಅವರಿಂದ ಉಪದೇಶ ಪಡೆಯುತ್ತ ಶಿಷ್ಯರೂ ತಮ್ಮಲ್ಲಿ ಆ ಆದರ್ಶಗುಣಗಳನ್ನು ಅಳವಡಿಸಿಕೊಳ್ಳುತ್ತಿದ್ದರು. ವಿದೇಶಿಯರ ಆಳ್ವಿಕೆಯ ಪರಿಣಾಮವಾಗಿ ಭಾರತದಲ್ಲಿ ಈ ಪದ್ಧತಿ ನಷ್ಟವಾಗಿದೆ. ಅದನ್ನು ನಮ್ಮ ಶಿಕ್ಷಣ ಪದ್ಧತಿಯಲ್ಲಿ ಮತ್ತೆ ಅಳವಡಿಸಬೇಕೆಂದು ಸ್ವಾಮೀಜಿ ಕರೆಕೊಡುತ್ತಾರೆ. ಗುರುಗೃಹವಾಸದಲ್ಲಿ ಕಲಿಯುವಂತಹ ಒಂದು ವಿಶೇಷ ಗುಣವೆಂದರೆ ಬ್ರಹ್ಮಚರ್ಯ ಪಾಲನೆ. ಪಂಚೇಂದ್ರಿಯಗಳನ್ನು ನಿಗ್ರಹಿಸಿ, ಅವುಗಳ ಶಕ್ತಿಯನ್ನು ಕ್ರೋಡೀಕರಿಸಿ, ಮನಸ್ಸಿನಲ್ಲಿ

ಕೇವಲ ಉನ್ನತ ಭಾವನೆಗಳನ್ನು ತುಂಬುವುದೇ ಬ್ರಹ್ಮಚರ್ಯ ಪಾಲನೆ. ಬ್ರಹ್ಮಚರ್ಯಪಾಲನೆಯಿಂದ ಆಹಾರದ ಸಾರ ಓಜಸ್ಸಾಗಿ ಪರಿಣಮಿಸಿ ಶರೀರದ ಆರೋಗ್ಯವನ್ನು ಹೆಚ್ಚಿಸಿ ಬುದ್ಧಿಯನ್ನು ಪ್ರಖರಗೊಳಿಸುತ್ತದೆ. ಅದಲ್ಲದೆ ಮೇಧಾನಾಡಿ ಯೆಂಬ ಹೊಸ ನಾಡಿ ಸೃಷ್ಟಿಯಾಗಿ, ಎಲ್ಲವನ್ನು ಗ್ರಹಿಸುವ, ಎಲ್ಲವನ್ನು ಸ್ಮರಣೆಯಲ್ಲಿಟ್ಟುಕೊಳ್ಳುವ ಅಪಾರ ಶಕ್ತಿ ಬರುತ್ತದೆ.

**ಶಿಕ್ಷಣ ಆತ್ಮವಿಶ್ವಾಸವನ್ನು ತುಂಬಬೇಕು**

ತನ್ನಲ್ಲಿ ಅಪಾರವಾದ ಅನಂತವಾದ ಶಕ್ತಿ ಇದೆ, ತಾನು 'ಶುದ್ಧ ಆತ್ಮ' – ಎಂಬ ಶ್ರದ್ಧೆ ಸ್ವತಃ ವಿದ್ಯಾರ್ಥಿಯ ಅಂತರಂಗ ದಿಂದ ಚಿಮ್ಮುವ ಶಿಕ್ಷಣ ನಮಗೀಗ ಅವಶ್ಯಕ. ವೇದಾಂತದ ಮಹಾನ್ ತತ್ತ್ವಗಳನ್ನು ಬೋಧಿಸುವುದರ ಮೂಲಕ, ಮಹಾತ್ಮರು ನಡೆದು ತೋರಿಸಿದ ಜೀವನಾದರ್ಶಗಳನ್ನು ಪರಿಚಯಿಸುವುದರ ಮೂಲಕ ವಿದ್ಯಾರ್ಥಿಯಲ್ಲಿ ಈ ಬಗೆಯ ಆತ್ಮಶ್ರದ್ಧೆಯನ್ನು ಮೂಡಿಸಬಹುದು. ಸ್ವಾಮಿ ವಿವೇಕಾನಂದರ ಮಾತಿನಲ್ಲಿ ಹೇಳುವುದಾದರೆ 'ನನ್ನಿಂದ ಏನೂ ಸಾಧ್ಯವಿಲ್ಲ, ನಾನು ದುರ್ಬಲ' ಮುಂತಾಗಿ ತನ್ನನ್ನು ತಾನು ನಿಂದಿಸಿ ಕೊಳ್ಳುವುದೇ ಎಲ್ಲಕ್ಕಿಂತ ದೊಡ್ಡ ಪಾಪ.

**ಉಪಸಂಹಾರ**

"ಈಗಾಗಲೇ ಇರುವ ದಿವ್ಯತೆಯನ್ನು ವ್ಯಕ್ತಗೊಳಿಸುವುದೇ ಧರ್ಮ". "ಈಗಾಗಲೇ ಇರುವ ಪರಿಪೂರ್ಣತೆಯನ್ನು ವ್ಯಕ್ತ ಗೊಳಿಸುವುದೇ ಶಿಕ್ಷಣ"–ಧರ್ಮ ಮತ್ತು ಶಿಕ್ಷಣದ ಬಗ್ಗೆ ಸ್ವಾಮೀಜಿ ಕೊಟ್ಟ ವ್ಯಾಖ್ಯಾನಗಳಿವು. 'ದಿವ್ಯತೆ' ಮತ್ತು 'ಪರಿಪೂರ್ಣತೆ' ಪರ್ಯಾಯ ಪದಗಳಂತೆ ಕಂಡರೂ ಪ್ರಾಯೋಗಿಕವಾಗಿ ಪರಿ ಪೂರ್ಣತೆ ಅನ್ನುವ ಪದವನ್ನು ಪ್ರಾಪಂಚಿಕ ವಿದ್ಯೆಗಳಿಗೆ ಅನ್ವಯಿಸಲಾಗುತ್ತದೆ. ಎಲ್ಲಾ ಪ್ರಾಪಂಚಿಕ ವಿದ್ಯೆಗಳ ಜ್ಞಾನವೂ ಮನಸ್ಸಿನಲ್ಲಿ ಅಡಗಿದೆ. ಅದನ್ನು ಸೂಕ್ತ ಶಿಕ್ಷಣದಿಂದ ಪ್ರಕಟ ಗೊಳಿಸಬಹುದು. ಉದಾಹರಣೆಗೆ ಸಂಗೀತಾಭ್ಯಾಸ. ಗುರುವು ತನ್ನ ಬೋಧನೆಯಿಂದ ಶಿಷ್ಯನ ಮನಸ್ಸಿಗೆ ಸೂಚನೆ ಕೊಡುತ್ತಾನೆ. ಆ ಸೂಚನೆಯಿಂದ ಶಿಷ್ಯನ ಮನಸ್ಸಿನಲ್ಲಿ ಸಂಗೀತದ ಬಗ್ಗೆ ಇರುವ ಅಜ್ಞಾನ ಹೋಗಿ ಜ್ಞಾನ ಬೆಳಗುತ್ತದೆ. ದಿವ್ಯತೆಯು ಇಂದ್ರಿಯಾತೀತವಾದ ಆತ್ಮಕ್ಕೆ ಸಂಬಂಧಿಸಿದ್ದು. ಆತ್ಮವು ಶುದ್ಧ, ಅಜರ, ಅಮರ, ನಿತ್ಯ, ಆನಂದಸ್ವರೂಪ. ಅದರ ಚೈತನ್ಯಶಕ್ತಿ ಯಿಂದಲೇ ಮನಸ್ಸು ಮತ್ತು ಇಂದ್ರಿಯಗಳು ಕೆಲಸ ಮಾಡುತ್ತಿವೆ. ಈ ದಿವ್ಯತೆಯನ್ನು ಪ್ರತಿ ಕ್ಷಣ, ಪ್ರತಿ ಕಾರ್ಯದಲ್ಲೂ ಪ್ರಕಟ ಗೊಳಿಸುವುದೇ ಧರ್ಮಾಚರಣೆ. ಈ ವಿಷಯದಲ್ಲೂ ಶಿಷ್ಯನು ಗುರುವಿನಿಂದ ಉಪದೇಶ ಪಡೆಯಬೇಕು. ಈ ಬೋಧನೆಯ ಪ್ರಭಾವದಿಂದ ಮತ್ತು ತನ್ನ ಸ್ವಂತ ಸಾಧನೆಯಿಂದ ಆತನ ಅಂತರಾತ್ಮವನ್ನು ಮುಚ್ಚಿರುವ ಎಲ್ಲ ರೀತಿಯ ಅಜ್ಞಾನವು ತೊಲಗಿ ಹೋಗುತ್ತದೆ; ಸ್ವಯಂಪ್ರಕಾಶವಾದ ಆತ್ಮ ಪ್ರಕಟ ವಾಗುತ್ತದೆ.

**ಧರ್ಮ ಮತ್ತು ಶಿಕ್ಷಣ** – ಈ ಎರಡರಲ್ಲೂ ಗುರುವಿನ ಬೋಧನೆ ಅತ್ಯವಶ್ಯಕ. ಹೀಗಾಗಿ ಒಂದನ್ನು ಲೌಕಿಕ ಶಿಕ್ಷಣ ಎಂದು ಭಾವಿಸಿ, ಇನ್ನೊಂದನ್ನು ಆಧ್ಯಾತ್ಮಿಕ ಶಿಕ್ಷಣ ಎಂದು ಭಾವಿಸಬಹುದು. ಲೌಕಿಕ ಶಿಕ್ಷಣದಲ್ಲಿ ಮನಸ್ಸಿನ ಮೇಲಿರುವ ಆವರಣ ಮತ್ತು ಆಧ್ಯಾತ್ಮಿಕ ಶಿಕ್ಷಣದಲ್ಲಿ ಆತ್ಮದ ಮೇಲಿರುವ ಆವರಣಗಳನ್ನು ನಿವಾರಿಸುವ ಪ್ರಯತ್ನ ನಡೆಯುವುದು. ಲೌಕಿಕ ಶಿಕ್ಷಣದಿಂದ ಒಬ್ಬ ಮನುಷ್ಯ ವಿಚಾರವಂತನಾಗಿ, ಬಹಳಷ್ಟು ದುಃಖಗಳನ್ನು ನಿವಾರಣೆ ಮಾಡಿಕೊಳ್ಳಬಲ್ಲ. ಆಧ್ಯಾತ್ಮಿಕ ಶಿಕ್ಷಣದಿಂದ ಜೀವನದ ಮೂಲಭೂತ ಸಮಸ್ಯೆಗಳಾದ ಸಾವು ಮುಂತಾದವುಗಳಿಂದ ಪಾರಾಗಬಲ್ಲ. ಈ ಎರಡರಲ್ಲೂ ದುಃಖ ಹಾನಿ ಮತ್ತು ಸುಖಪ್ರಾಪ್ತಿಯೇ ಮೂಲ ಉದ್ದೇಶ. ಶಿಕ್ಷಣ ಲೌಕಿಕ ಆನಂದವನ್ನು ತಂದುಕೊಟ್ಟರೆ, ಧರ್ಮದಿಂದ ಪಾರ ಮಾರ್ಥಿಕ ಆನಂದವನ್ನು ಪಡೆಯಬಹುದು. ಶಿಕ್ಷಣ ಧರ್ಮ ವಾಗಬೇಕು, ಧರ್ಮ ಶಿಕ್ಷಣದಂತೆ ಇರಬೇಕು. ಹೀಗಾದಾಗ ಮಾತ್ರ ಸರ್ವಾಂಗೀಣ ವ್ಯಕ್ತಿತ್ವವಿಕಸನ ಸಾಧ್ಯ. ಅದೇ ಬಾಳನ್ನು ಸಾರ್ಥಕವನ್ನಾಗಿಯೂ ಸುಸಂಪನ್ನವನ್ನಾಗಿಯೂ ಮಾಡುವುದು.

**ಆಕರಗಳು**

೧. ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ೨, ಪು. ೭

೨. ಸೋದರಿ ನಿವೇದಿತಾಳಿಗೆ ಬರೆದ ಪತ್ರ, ಕೃ. ಶ್ರೇ. ೪, ಪು.೪೨೦

೩. ಕೃಶ್ರೇ. ೨. ಪು. ೨೧೬

೪. ಸ್ವಾಮಿ ವಿವೇಕಾನಂದರ ಬೋಧನೆಯ ಸಾರ, ಪು ೪೩

**'ಅಷ್ಟು ಮಾಡಿದರೆ ನನ್ನ ಕೆಲಸ ಮುಗಿಯಿತು'**



ಅಮೆರಿಕೆಯಲ್ಲಿರುವಾಗಲೂ ಸ್ವಾಮಿ ತ್ರಿಗುಣಾತೀತಾನಂದರು ನಿಷ್ಠುರ ತಪಸ್ವಿ ಜೀವನ ನಡೆಸುತ್ತಿದ್ದರು. ಆಡುವ ಮಾತಿಗಿಂತ ಹೆಚ್ಚಾಗಿ ತಮ್ಮ ಅನುಷ್ಠಾನ–ಆಚರಣೆಗಳಿಂದ ಶಿಷ್ಯರು ಕಲಿಯುವಂತೆ ಮಾಡುತ್ತಿದ್ದರು. ಕ್ರಮಬದ್ಧತೆ ನಿಯಮ ನಿಷ್ಠೆಗಳಿಗೆ ಅವರು ಇನ್ನೊಂದು ಹೆಸ ರಾಗಿದ್ದರು. ಮಠದ ಎಲ್ಲರೂ ಮಲಗಿದ ಮೇಲೆ ಮಲಗಿ ಎಲ್ಲರಿಗಿಂತ ಮುಂಚೆ ಏಳುತ್ತಿದ್ದರು. ಅವರ ಕಛೇರಿಯೇ ಅವರ ಮಲಗುವ ಮನೆಯಾಗಿದ್ದಿತು; ಹಾಸಿಗೆ ಯೇನೂ ಇರಲಿಲ್ಲ; ನೆಲಕಂಬಳಿ ಮೇಲೆ ಇನ್ನೊಂದು ಕಂಬಳಿ ಹಾಸಿ ಮಲಗಿ, ಮೇಲೊಂದು ಕಂಬಳಿ ಹೊದೆಯುತ್ತಿದ್ದರು; ತಮ್ಮ ಬಲತೋಳನ್ನೇ ತಲೆದಿಂಬಾಗಿಸಿಕೊಳ್ಳುತ್ತಿದ್ದರು. ಆಧ್ಯಾತ್ಮಿಕ ಜೀವನಕ್ಕೆ ಅತ್ಯಾವಶ್ಯಕ ಅಡಿಪಾಯವಾದ ಶೀಲನಿರ್ಮಾಣವು ಸಾಧ್ಯವಾಗ ಬೇಕಾದರೆ ಶಿಸ್ತಿನ ಮೂಲಕವಾಗಿಯೇ ಎಂಬುದು ಅವರ ದೃಢನಂಬಿಕೆ ಯಾಗಿದ್ದಿತು. ಶ್ರದ್ಧಾವಂತ ಶಿಷ್ಯರಿಗೆ ಅವರು ಹೇಳುತ್ತಿದ್ದರು: "ಅಮೃತತ್ವದ ಸಾಗರತೀರಕ್ಕೆ ನಿನ್ನನ್ನು ಸೆಳೆದೊಯ್ದು ಅದರೊಳಕ್ಕೆ ತಳ್ಳುವುದಕ್ಕೆ ನಿನ್ನ ಮೂಳೆ ಮೂಳೆಗಳನ್ನೂ ಮುರಿಯಲು ನಾನು ಹಿಂಜರಿಯುವುದಿಲ್ಲ. ಅಷ್ಟು ಮಾಡಿದರೆ ನನ್ನ ಕೆಲಸ ಮುಗಿಯಿತು."

**(ಸ್ವಾಮಿ ತ್ರಿಗುಣಾತೀತಾನಂದ ಜಯಂತಿ, ಫೆಬ್ರವರಿ ೧೦)**